ಸ್ಥಳೀಯ ಹೆಸರು ಬೇರೆಯೇ ಇದ್ದಿರಬಹುದು. ಅದು ದುರ್ಗಮ ಪ್ರದೇಶ. ಹೋಗುವಾಗ ಏರಿಯಲ್ ಪಿಕ್ಚರ್ ತೆಗೆದೆ. ಲ್ಯಾಂಡ್ ಆದ ನಂತರ ಧ್ವಜ ಗೌರವದ ಫೋಟೊ ತೆಗೆದೆ. ಅದು ಯುದ್ಧಭೂಮಿಯಲ್ಲಿನ ನನ್ನ ಮೊದಲ ಕೆಲಸ. ಅಲ್ಲೇ ಐದು ದಿನ ಇದ್ದೆ. ಅಲ್ಲಿಂದ ಅವರ ಬೇರೆ ಬೇರೆ ಚಟುವಟಿಕೆಗಳನ್ನು ವೀಕ್ಷಿಸಲು ಪ್ರತಿದಿನವೂ ಸುತ್ತಾಟ ಮಾಡಿಸುತ್ತಿದ್ದರು. ಬೇರೆ ತುಕಡಿಗಳು ಕಾರ್ಯಚಟುವಟಿಕೆಯ ಸ್ಥಳಕ್ಕೂ ಕರೆದುಕೊಂಡು ಹೋಗುತ್ತಿದ್ದರು. ಅಫ್ಘಾನಿಸ್ತಾನ ಸ್ವತಂತ್ರ ಸೇನೆ (ಎಎನ್ಐ) ಹೊಂದಲು ತರಬೇತಿಯನ್ನೂ ಅಂತರರಾಷ್ಟ್ರೀಯ ಭದ್ರತಾ ನೆರವು ಪಡೆ ನೀಡುತ್ತಿತ್ತು. ಹೊಸ ಸೇನಾಪಡೆ ಕಟ್ಟಲು ನೇಮಕಾತಿ ಕೂಡ ನಡೆದಿತ್ತು. ರಾಷ್ಟ್ರೀಯ ಸೇನಾ ಉದ್ಯೋಗಕ್ಕೆ ಅನೇಕ ಯುವಕರು ಸೇರುತ್ತಿದ್ದರು. ದುಡಿಯುವ ಕೈಗಳಿಗೆ ಉದ್ಯೋಗದ ಅವಕಾಶ ಕಡಿಮೆ ಇದ್ದುದರಿಂದ ಸೇನಾ ನೇಮಕಾತಿಗೆ ಬೇಡಿಕೆ ಇತ್ತು.

ಸ್ಥಳೀಯರ ಮನಸ್ಸನ್ನು ಗೆದ್ದು, ಅವರಿಂದ ಮಾಹಿತಿ ಸಂಗ್ರಹಿಸುವ ತಂತ್ರಗಾರಿಕೆಯನ್ನು ಅಮೆರಿಕದ ಸೇನೆ ಮಾಡುತ್ತಿತ್ತು. ಸೌಲಭ್ಯ ವಂಚಿತ ಜನರಿಗೆ ಗುಣಮಟ್ಟದ ವೈದ್ಯಕೀಯ ಸೌಲಭ್ಯ ನೀಡುತ್ತಿತ್ತು. ಚಿಕ್ಕ ವೈದ್ಯಕೀಯ ನೆರವಿಗೂ ದೂರದ ನಗರಕ್ಕೆ ಹೋಗಬೇಕಾದ ಸ್ಥಿತಿ. ಇಲ್ಲವೇ ಎಲ್ಲ ರೋಗಕ್ಕೂ ಸ್ಥಳೀಯ ನಾಟಿ ಮದ್ದನ್ನೇ ದಿವ್ಯೌಷಧ ಎಂದು ತೆಗೆದುಕೊಳ್ಳಬೇಕಿತ್ತು. ಉಗ್ರರ ಭೀತಿಯಿಂದಾಗಿ ಪ್ರಯಾಣ ಕಷ್ಟಕರವಾಗಿತ್ತು. ಅಲ್ಟ್ರಾಸೌಂಡ್‌ನಂತಹ ಪರೀಕ್ಷೆಗಳು ಸೇರಿದಂತೆ ಸುಧಾರಿತ ಚಿಕಿತ್ಸೆಯನ್ನು ಅಮೆರಿಕದ ಸೇನೆ ಅಲ್ಲಿನ ಜನರಿಗೆ ನೀಡುತ್ತಿತ್ತು. ಆ ಮೂಲಕ ತಾನು ಅಫ್ಘಾನಿಸ್ತಾನದ ವಿರೋಧಿ ಅಲ್ಲ; ಭಯೋತ್ಪಾದಕ ವಿರೋಧಿ ಮಾತ್ರ ಎನ್ನುವುದನ್ನು ಮನವರಿಕೆ ಮಾಡಿಕೊಡುತ್ತಿತ್ತು. ಸೇನೆಯ ಬಳಿ ಇದ್ದ ಮೋಸ್ಟ್ ವಾಟೆಂಡ್ ಉಗ್ರವಾದಿಗಳ ಫೋಟೊಗಳನ್ನು ತೋರಿಸಿ ವಿವರವನ್ನು ಕೇಳುತ್ತಿತ್ತು. ಅಂತಹ ವ್ಯಕ್ತಿಗಳ ಬಗ್ಗೆ ಎಚ್ಚರಿಕೆಯಿಂದ ಇರುವ ಸೂಚನೆಯನ್ನೂ ನೀಡುತ್ತಿತ್ತು.

## ಉತ್ತರ ಸಿಗದ ಪ್ರಶ್ನೆಗಳು

ಪತ್ರಕರ್ತನಾಗಿ ನನ್ನಲ್ಲೂ ಅನೇಕ ಪ್ರಶ್ನೆಗಳಿದ್ದವು. ಅಲ್ಲಿನ ಜನರನ್ನು ಮಾತನಾಡಿಸಲು ಸಾಧ್ಯವೇ ಆಗಲಿಲ್ಲ. ಎಲ್ಲ ನಾಗರಿಕರೂ ಸೇನೆಯ ಚಟುವಟಿಕೆಯನ್ನು ಬೆಂಬಲಿಸುತ್ತಿದ್ದರೆ ಎಂದರೆ, ಅದೂ ಗೊತ್ತಿಲ್ಲ. ಸಾಕಷ್ಟು ಜನರಿಗೆ ಇವರ ಯಾರ ಸಹವಾಸವೂ ಬೇಡ ಎಂದು ಅನ್ನಿಸಿರಬಹುದು. ನೆಮ್ಮದಿಯ ಬದುಕು ಸಿಕ್ಕರೆ ಸಾಕು ಎಂದು ಪರಿತಪಿಸಿರಬಹುದು. ಒಂದುಕಡೆ ಅಮೆರಿಕ, ಮತ್ತೊಂದು ಕಡೆ ಅಫ್ಘಾನಿಸ್ತಾನದ ವ್ಯವಸ್ಥೆ, ಮಗದೊಂದು ಕಡೆ ತಾಲಿಬಾನಿಗಳ ಒತ್ತಡ — ತ್ರಿಶಂಕು ಸ್ಥಿತಿ ಎಂದರೆ ಇದೇ ಅಲ್ಲವೇ? ನಿರಂತರ ಸಂಘರ್ಷದ ಕಿಚ್ಚಿನಲ್ಲಿ ಬೆಂದ ಜೀವಗಳ ಅಂತರಾಳದ ದನಿ ಕೇಳಿಸಿಕೊಳ್ಳುವ ಅವಕಾಶ ದೊರೆಯಲಿಲ್ಲ ಎನ್ನುವ ಕೊರಗು ಇದ್ದೇ ಇದೆ.

ನಾಗರಿಕ ಜನಜೀವನ ಸೇನೆಯನ್ನು ಹೇಗೆ ನೋಡುತ್ತಿತ್ತು ಎನ್ನುವುದೂ ಗೊತ್ತಿಲ್ಲ. ಅಲ್ಲಿನ ಜನರನ್ನು ಸಂಪರ್ಕಿಸಲು ಸಾಧ್ಯವೇ ಇರಲಿಲ್ಲ. ಅಂಥ ಪ್ರಯತ್ನಕ್ಕೆ ಮುಂದಾಗುವುದು ಉದ್ಧಟತನ ಎನ್ನಿಸಿಕೊಳ್ಳುತ್ತಿತ್ತು ಹಾಗೂ ಅದು ಸೇನಾ ನಿಯಮದ ಉಲ್ಲಂಘನೆಯಾಗುತ್ತಿತ್ತು. ಒಂದು ಫೋಟೊ ತೆಗೆದರೂ ಅದು ಸೇನಾ ಉಸ್ತುವಾರಿಯಲ್ಲೇ ತೆಗೆಯಬೇಕಿತ್ತು. ಸೇನೆ ಏನನ್ನು ತೋರಿಸುತ್ತದೆಯೋ ಅದನ್ನು ಹೊರತುಪಡಿಸಿ ಬೇರೆ ಏನನ್ನೂ ನೋಡಲು ಆಗಲಿಲ್ಲ. ಇಷ್ಟೆಲ್ಲ ಕಟ್ಟುಪಾಡುಗಳ ನಡುವೆಯೂ — ಹೀಗೇ ಬರೆಯಬೇಕು, ಇದನ್ನೇ ವರದಿ ಮಾಡಬೇಕು ಎನ್ನುವ ಒತ್ತಡ ನಮ್ಮ ಮೇಲಿರಲಿಲ್ಲ.

ಸ್ಥಳೀಯರನ್ನು ಮಾತನಾಡಿಸದೇ ಇರಲು ಮತ್ತೊಂದು ಕಾರಣ ಸ್ಥಳೀಯ ಭಾಷೆ ಗೊತ್ತಿರಲಿಲ್ಲ. ಎಲ್ಲದಕ್ಕೂ ಭಾಷಾಂತರಕಾರರ ನೆರವು ಬೇಕಾಗುತ್ತದೆ. ನಾನು ಅವರ ಸಹಾಯ ಪಡೆದರೂ ಆತ ಅಧಿಕಾರಿಗಳ ಜೊತೆ ಚರ್ಚಿಸಿ ನನ್ನ ಪ್ರಶ್ನೆಗೆ ಅನುಮತಿ ನೀಡುತ್ತಿದ್ದರು. ಹಾಗಾಗಿ ನನ್ನ ಕುತೂಹಲದ ದೃಶ್ಯಗಳಿಗೆ ದಾಖಲೆಯ ರೂಪ ನೀಡಲು ಸಾಧ್ಯ ಆಗಲಿಲ್ಲ.

## ಔತಣದ ಸಂಭ್ರಮದಲ್ಲಿ ಭೀತಿಯ ಜಾಗರಣೆ

ಯಾವುದೋ ಹಳ್ಳಿಯ ಒಂದು ಮನೆ. ಆ ಊರಿನ ಮುಖ್ಯಸ್ಥರು ಮತ್ತು ಸ್ಥಳೀಯ ಸೇನೆಯಿಂದ ಅಮೆರಿಕದ ಸೇನೆಯನ್ನು ಔತಣಕ್ಕೆ ಆಹ್ವಾನಿಸಲಾಗಿತ್ತು. ಸೇನೆ ಮೂರು ವಾಹನಗಳಲ್ಲಿ ಔತಣಕ್ಕೆ ಹೋಗಿತ್ತು. ನಾನೂ ಹೋಗಿದ್ದೆ. ಸೇನಾ ತುಕಡಿ ಬೀಡು ಬಿಟ್ಟ ಸ್ಥಳದಿಂದ ಸುಮಾರು 30 ಕಿ.ಮೀ. ದೂರದಲ್ಲಿ ಆ ಹಳ್ಳಿ ಇತ್ತು. ಸ್ಫೋಟ ನಿರೋಧಕ ಮೂರು ವಾಹನಗಳಲ್ಲಿ ನಾವು ಪ್ರಯಾಣ





ಬಾಂಬ್ ನಿರೋಧಕವಾಹನಗಳು ಸಾಲಾಗಿ ಸೇನಾ ನೆಲೆಗೆ ಮರಳುತ್ತಿರುವುದು

ಅನುಭವ ಕಥನ